ಕರ್ನಾಟಕ ವಿಧಾನಪರಿಷತ್ತಿನ ನಡವಳಿಕೆಗಳು

# KARNATAKA LEGISLATIVE COUNCIL DEBATES

ಅಧಿಕೃತ ವರದಿ

## OFFICIAL REPORT

೧೩೦ ನೇ ಅಧಿವೇಶನ

## 130th SESSION

ಸಂಪುಟ–೪೪೦ ಕ್ರಮಾಂಕ (೩)

**Volume -440 (No. 3)**

( ೦೨ ನೇ ಮಾರ್ಚ್ ೨೦೧೬)

**(02nd March 2016)**

ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯ, ಬೆಂಗಳೂರು

**Karnataka Legislative Council Secretariat, Bangalore**

|

# ಕರ್ನಾಟಕ ವಿಧಾನ ಪರಿಷತ್ತು

*ದಿನಾಂಕ 02ನೇ ಮಾರ್ಚ್ 2016*
*ಬುಧವಾರ,*

**ವಿಷಯಾನುಕ್ರಮಣಿಕೆ**


**1. ನಿಯಮ 59ರ ಮೇರೆಗೆ ನಿಲುವಳಿ ಸೂಚನೆ ಮಂಡಿಸಲು ಅನುಮತಿ ಕೋರಿ ಮುಂದುವರೆದ ಧರಣಿ** **2–9**

- ಶ್ರೀ ಎಸ್ . ಆರ್ ಪಾಟೀಲ್ (ಸಭಾನಾಯಕರು)
- ಶ್ರೀ ಕೆ.ಬಿ. ಶಾಣಪ್ಪ
- ಶ್ರೀ ರಾಮಚಂದ್ರಗೌಡ

**(ವಿರೋಧ ಪಕ್ಷದ ಸದಸ್ಯರಿಂದ ಧರಣಿ)**


– – – –

**ಕರ್ನಾಟಕ ವಿಧಾನ ಪರಿಷತ್ತು**

***ಬುಧವಾರ, 02ನೇ ಮಾರ್ಚ್ 2016***

**ಸದನವು ವಿಧಾನ ಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ ಪೂರ್ವಾಹ್ನ 11 ಗಂಟೆ 25 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿ (ಶ್ರೀ ಡಿ.ಹೆಚ್.ಶಂಕರಮೂರ್ತಿ) ಅವರು ಪೀಠದಲ್ಲಿ ಉಪಸ್ಥಿತರಿದ್ದರು.**

**1. ನಿಯಮ 59ರ ಮೇರೆಗೆ ನಿಲುವಳಿ ಸೂಚನೆ ಮಂಡಿಸಲು ಅನುಮತಿ ಕೋರಿ ಮುಂದುವರೆದ ಧರಣಿ.**

**(ಈ ಹಂತದಲ್ಲಿ ಬಿಜೆಪಿ ಮತ್ತು ಜೆಡಿಎಸ್ ಸದಸ್ಯರು ಬಾವಿಗೆ ಬಂದು ಧರಣಿ ನಿಂತರು)**

**ಸಭಾಪತಿಯವರು:–** ದಯಮಾಡಿ ಎಲ್ಲ ಮಾನ್ಯ ಸದಸ್ಯರು ತಮ್ಮ–ತಮ್ಮ ಸ್ಥಾನಕ್ಕೆ ಬರಬೇಕು. ಸದನ ನಡೆಸಲು ಅವಕಾಶ ಮಾಡಿಕೊಡಬೇಕು. ದಯಮಾಡಿ ಬಂದು ಸ್ಥಾನದಲ್ಲಿ ಕುಳಿತುಕೊಳ್ಳಿ. ನಿನ್ನೆ ನಿಮ್ಮ ವಿಷಯವನ್ನು ಪ್ರಸ್ತಾಪ ಮಾಡಿದ್ದೀರಿ. ಸದನ ನಡೆಸಲು ಅವಕಾಶ ಮಾಡಿಕೊಡಿ ಎಂದು ಮತ್ತೊಮ್ಮೆ ಕೇಳಿಕೊಳ್ಳುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್(ಸಭಾನಾಯಕರು):–** ಮಾನ್ಯ ಸಭಾಪತಿಗಳೆ, ನಿನ್ನೆ ಚರ್ಚೆ ಆಗಿದೆ, ಸರ್ಕಾರದ ಪರವಾಗಿ ಉತ್ತರ ಕೊಡಲಾಗಿದೆ. ಸದನ ನಡೆಯುವುದು ಇನ್ನು ನಾಲ್ಕು ದಿನಗಳು ಮಾತ್ರ. 40 ವರ್ಷಗಳ ನಂತರ ರಾಜ್ಯ ಭೀಕರ ಬರಗಾಲವನ್ನು ಎದುರಿಸುತ್ತಿದೆ. ಜನ–ಜಾನುವಾರುಗಳಿಗೆ ತೊಂದರೆಯಾಗಿದೆ. ಕುಡಿಯುವ ನೀರಿನ ಸಮಸ್ಯೆ ಇದೆ. ರಾಜ್ಯವು ಇಂದು ಅನೇಕ ಭೀಕರ ಸಮಸ್ಯೆಗಳನ್ನು ಎದುರಿಸುತ್ತಿದೆ. ಇವುಗಳನ್ನು ಬಿಟ್ಟು ಇವರು ವಾಚ್‌ಗೆ, ಪೆನ್‌ಗೆ, ಶೂ ಗಾಗಿ ಇವರು ಬಾವಿಗೆ ಬಂದು ಹೋರಾಟ ಮಾಡುತ್ತಿದ್ದಾರೆ. ಇದನ್ನು ನೋಡಿದ ಜನರು ಇವರ ಮುಖಕ್ಕೆ ಮಂಗಳಾರತಿ ಮಾಡುತ್ತಾರೆ. ಇಂತಹ ಪವಿತ್ರವಾದ ಸದನದಲ್ಲಿ ಭೀಕರ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡದೆ, ಈ ಸಣ್ಣ ವಿಚಾರಕ್ಕೆ ಬಾವಿಗೆ ಬಂದಿರುವ ಇವರ ಮುಖಕ್ಕೆ ರಾಜ್ಯದ ಜನರು ಮಂಗಳಾರತಿ ಮಾಡುತ್ತಾರೆ. ಅವರ ಆಡಳಿತದಲ್ಲಿ ವಾಚ್ ನಂತರ ಲಕ್ಷಾಂತರ ಹಗರಣಗಳು ನಡೆದಿವೆ, ಭಾರತೀಯ ಜನತಾ ಪಕ್ಷದ ಅವಧಿಯಲ್ಲಿ ಕರ್ನಾಟಕದಲ್ಲಿ ಅತೀ ಭ್ರಷ್ಟ ಸರ್ಕಾರ ಇತ್ತು ಎಂಬುದು ಚರಿತ್ರೆಯಾಗಿದೆ. ಅವರಂತಹ ಭಂಡರು ಇಡೀ ಜಗತ್ತಿನಲ್ಲಿಯೇ ಇಲ್ಲ.

**(ಗೊಂದಲ)**

ಭಂಡತನಕ್ಕೂ ಇತಿ–ಮಿತಿ ಬೇಕು. ಇವರಿಗೆ ರಾಜ್ಯದ ಜನರ ಸಮಸ್ಯೆಗಳ ಬಗ್ಗೆ ಎಳ್ಳಷ್ಟು ಕಾಳಜಿ ಇಲ್ಲ. ಬಡವರ ಬಗ್ಗೆ ಕಾಳಜಿ ಇಲ್ಲ. ಆ ಒಂದು ವಾಚ್‌ನ ನೆಪ ಮಾಡಿಕೊಂಡು ಈ ರೀತಿ ನಡೆದುಕೊಳ್ಳುತ್ತಿದ್ದಾರೆ.

**( ಈ ಹಂತದಲ್ಲಿ ಧರಣಿ ನಿರತ ಸದಸ್ಯರು ವಾಚ್‌ನ ಚಿತ್ರವನ್ನು ಪ್ರದರ್ಶನ ಮಾಡಿದರು,**

**ಮುಖ್ಯಮಂತ್ರಿಗಳು ರಾಜೀನಾಮೆ ನೀಡಬೇಕೆಂದು ಘೋಷಣೆ ಕೂಗಿದರು)**

**(ಗೊಂದಲ)**

**( ಬಾವಿಯಲ್ಲಿ ಧರಣಿ ನಿರತ ಸದಸ್ಯರು ಗಿಪ್ಪಾ–ಥೆಪ್ಪಾ ಎಂದು ಘೋಷಣೆ ಕೂಗುತ್ತಿದ್ದರು)**

ಈ ದೇಶದ ಪ್ರಧಾನ ಮಂತ್ರಿಗಳಿಗೆ 10 ಲಕ್ಷ ರೂ.ಗಳ ಫುಲ್ ಸೂಟ್ ಕೊಟ್ಟಿದ್ದರು. ಅವರು ಕೂಡಾ ಅದಕ್ಕೆ ತೆರಿಗೆ ಕಟ್ಟಿರುವುದಿಲ್ಲ, ಡಿಕ್ಲೇರ್ ಮಾಡಿರುವುದಿಲ್ಲ. ಮೊದಲು ಮಾನ್ಯ ನರೇಂದ್ರ ಮೋದಿಯವರು ರಾಜೀನಾಮೆ ಕೊಡುವಂತೆ ಹೇಳಿ.

**(ಗೊಂದಲ)**

**( ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರು "ನಡೆಸಿ–ನಡೆಸಿ ಸದನ ನಡೆಸಿ" ಎಂದು ಘೋಷಣೆ ಕೂಗಿದರು)**

**(ಗೊಂದಲ)**

ಶ್ರೀ ಕೆ.ಬಿ.ಶಾಣಪ್ಪ:– ಇವರೇನು ಆಡಳಿತ ಪಕ್ಷದವರಾಗಿ ಘೋಷಣೆ ಕೂಗುತ್ತಿದ್ದಾರೆ?

**ಶ್ರೀ ಎಸ್.ಆರ್.ಪಾಟೀಲ್:–** ಅವರ ಪ್ರಧಾನ ಮಂತ್ರಿಗಳು ಮೊದಲು ರಾಜೀನಾಮೆ ಕೊಡಲಿ ನೀತಿ ಹೇಳುವವರು ಮೊದಲು ನೀತಿವಂತರಾಗಬೇಕು. 120 ಕೋಟಿ ಜನರ ಪ್ರತಿನಿಧಿಯಾದ ಈ ದೇಶದ ಪ್ರಧಾನ ಮಂತ್ರಿಗಳು 10 ಲಕ್ಷ ರೂ.ಗಳ ಸೂಟ್‌ನ್ನು ಒಬ್ಬ ಉದ್ಯಮಿಯಿಂದ ಪಡೆದಿದ್ದರು. ಅದಕ್ಕೆ ತೆರಿಗೆ ಕಟ್ಟಿಲ್ಲ, ಡಿಕ್ಲೇರ್

ಮಾಡಿರುವುದಿಲ್ಲ. ಮನೆಯಲ್ಲಿರುವ ಆಭರಣವನ್ನು ಕಳ್ಳತನ ಮಾಡಿ, ಅದನ್ನು ದಾನ ಕೊಟ್ಟರೆ, ಮುಗಿಯುವುದಿಲ್ಲ. ಕಳ್ಳತನ ಕಳ್ಳತನವೇ ಆಗಿರುತ್ತದೆ. ಇವರಿಗೆ ಯಾವುದೆ ನೈತಿಕತೆ ಇಲ್ಲ. ಈ ರಾಜ್ಯದ ಜನತೆ ಬಗ್ಗೆ ಭಾವನೆಗಳಿಲ್ಲ.

**(ಗೊಂದಲ)**

**ಸಭಾಪತಿಯವರು:–** ನಿಮ್ಮ ಭಾವನೆಗಳನ್ನು ಹೇಳಿದ್ದೀರಿ. ಸಾಕು ಈಗ ನಿಮ್ಮ–ನಿಮ್ಮ ಸ್ಥಾನಗಳಿಗೆ ಬನ್ನಿ.

**ಶ್ರೀ ಎಸ್.ಆರ್.ಪಾಟೀಲ್:–** ಒನ್ ಪಾಯಿಂಟ್ ಪ್ರೊಗ್ರಾಂನಿಂದ ಸರ್ಕಾರ ಉತ್ತಮ ರೀತಿಯಿಂದ ನಡೆಯುತ್ತಿದೆ, ಅತ್ಯಂತ ದಕ್ಷ, ಪ್ರಮಾಣಿಕ, ನಿಷ್ಠಾವಂತ ಮುಖ್ಯಮಂತ್ರಿಗಳ ಏಳಿಗೆಯನ್ನು ಸಹಿಸದೆ ಇವರು ಬಾವಿಗೆ ಬಂದಿದ್ದಾರೆ. ವಿರೋಧ ಪಕ್ಷದವರಿಗೆ ನಾಚಿಗೆ ಬರಬೇಕು. ನಾಚಿಗೆ ಎನ್ನುವ ಮೂರು ಅಕ್ಷರವನ್ನೇ ಮರೆತು ಬಿಟ್ಟಿದ್ದೀರೀ.

**(ಗೊಂದಲ)**

**ಸಭಾಪತಿಯವರು:–** ಸದನವನ್ನು 12–00 ಗಂಟೆವರೆಗೆ ಮುಂದೂಡುತ್ತಿದ್ದೇನೆ.

**( ಸದನವನ್ನು ಮಧ್ಯಾಹ್ನ 12–00 ಗಂಟೆವರೆಗೆ ಮುಂದೂಡಲಾಯಿತು)**

**(11 ಗಂಟೆ 26 ನಿಮಿಷಕ್ಕೆ ಮುಂದೂಡಲ್ಪಟ್ಟಿದ್ದ ಸದನವು ಪುನಃ 12 ಗಂಟೆ 16 ನಿಮಿಷಗಳಿಗೆ ಸಮಾವೇಶಗೊಂಡಿತು. ಮಾನ್ಯ ಸಭಾಪತಿಯವರು ಸಭಾಪೀಠವನ್ನು ಅಲಂಕರಿಸಿದರು.)**

**(ಈ ಹಂತದಲ್ಲಿ ವಿರೋಧ ಪಕ್ಷದ ಎಲ್ಲ ಸದಸ್ಯರು ಸದನದ ಬಾವಿಯೊಳಗೆ ಬಂದು ಧರಣಿಯನ್ನು ಮುಂದುವರಿಸಿದರು)**

**ಸಭಾಪತಿಯವರು:–** ಗೌರವಾನ್ವಿತ ಸದಸ್ಯರು ತಮ್ಮತಮ್ಮ ಸ್ಥಾನಗಳಿಗೆ ಮರಳಿ ಸದನವನ್ನು ನಡೆಸುವುದಕ್ಕೆ ಅನುವು ಮಾಡಿಕೊಡಬೇಕು ಮತ್ತು ಸದನ ನಡೆಸುವುದಕ್ಕೊಂದು ವಾತಾರಣ ನಿರ್ಮಾಣವಾಗಬೇಕೆನ್ನುವುದು ನನ್ನ ಕೋರಿಕೆ. ಸದನದಲ್ಲಿ ಚರ್ಚಿಸಲು ಬಹಳಷ್ಟು ವಿಷಯಗಳಿವೆ ತಾವೆಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ಮರಳಿದರೆ ಸದನ ನಡೆಸಬಹುದು. ಆದ್ದರಿಂದ ತಾವೆಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ಮರಳಿ ಸದನ ನಡೆಸುವುದಕ್ಕೆ ಅನುವು ಮಾಡಿಕೊಡಬೇಕಾಗಿ ನಾನು ತಮ್ಮೆಲ್ಲರಲ್ಲಿ ಕೇಳಿಕೊಳ್ಳುತ್ತಿದ್ದೇನೆ.

ಮಾನ್ಯ ಸಭಾನಾಯಕರು ಧರಣಿ ನಿರತ ಸದಸ್ಯರು ತಮ್ಮ ಸ್ಥಾನಗಳಿಗೆ ಮರಳುವಂತೆ ಮನವೊಲಿಸುವ ಪ್ರಯತ್ನ ಮಾಡಬೇಕು.

**ಶ್ರೀ ಎಸ್.ಆರ್.ಪಾಟೀಲ್(ಸಭಾ ನಾಯಕರು):–** ಸನ್ಮಾನ್ಯ ಸಭಾಪತಿಯವರೆ, ವಿರೋಧ ಪಕ್ಷದ' ಎಲ್ಲ ಸದಸ್ಯರು ತಮ್ಮ ತಮ್ಮ ಸ್ಥಾನಗಳಿಗೆ ಮರಳಬೇಕೆಂದು ಮನವಿ ಮಾಡಿಕೊಳ್ಳುತ್ತಿದ್ದೇನೆ. ಏಕೆಂದರೆ, ಘನತೆವೆತ್ತ ರಾಜ್ಯಪಾಲರ ಭಾಷಣಕ್ಕೆ ವಂದನಾರ್ಪಣೆ ಸಲ್ಲಿಸುವ ಸಲುವಾಗಿ ಅಲ್ಪಕಾಲಿಕ ಅಧಿವೇಶನವನ್ನು ಕರೆಯಲಾಗಿದೆ. ರಾಜ್ಯದಲ್ಲಿ ಅನೇಕ ಜ್ವಲಂತ ಸಮಸ್ಯೆಗಳಿವೆ, ಕಳೆದ' ನಾಲ್ಕು ದಶಕಗಳಲ್ಲಿ ಕಂಡರಿಯದ ಮತ್ತು ನನ್ನ ಜೀವಮಾನದಲ್ಲಿಯೇ ಕಾಣದಂತಹ ಭೀಕರ ಬರಗಾಲವನ್ನು ರಾಜ್ಯ ಎದುರಿಸುತ್ತಿದೆ. ಜನರು ಮತ್ತು

ಜಾನುವಾರುಗಳು ಕುಡಿಯಲು ನೀರಿಲ್ಲದೆ ಕಂಗಾಲಾಗಿದ್ದಾರೆ. ನದಿಗಳಲ್ಲಿ, ಜಲಾಶಯಗಳಲ್ಲಿ ಮತ್ತು ಬೋರ್‌ವೆಲ್‌ಗಳಲ್ಲಿ ನೀರಿಲ್ಲದೆ ಒಣಗಿ ಹೋಗಿರುವ ಪರಿಸ್ಥಿತಿ ಇದೆ. ಈ ಭೀಕರ ಬರಗಾಲದ ಪರಿಸ್ಥಿತಿಯ ಬಗ್ಗೆ ಕೇಂದ್ರದ ಗಮನ ಸೆಳೆಯಲು ವಿರೋಧ ಪಕ್ಷದವರನ್ನು ಕರೆದುಕೊಂಡು ದೆಹಲಿಗೆ ಹೋಗಿ ಮಾನ್ಯ ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಿ ಬಂದಿದ್ದೇವೆ. ಇಂತಹ ಸಂದರ್ಭದಲ್ಲಿ ಯಾವುದೋ ಒಂದು ವಿಚಾರವನ್ನು ಹಿಡಿದುಕೊಂಡು ಧರಣಿ ಮಾಡುವುದು ಸರಿಯಲ್ಲ. ವಿರೋಧ ಪಕ್ಷದ ಎಲ್ಲ ಗೌರವಾನ್ವಿತ ಸದಸ್ಯರು ತಮ್ಮ ತಮ್ಮ ಸ್ಥಾನಗಳಿಗೆ ಮರಳಬೇಕೆಂದು ಮನವಿ ಮಾಡಿಕೊಳ್ಳುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೆ, ರಾಜ್ಯದ ಜನತೆಯ ಸಮಸ್ಯೆಯನ್ನು ಚರ್ಚೆ ಮಾಡಿ ಅದಕ್ಕೆ ಪರಿಹಾರವನ್ನು ಕಂಡುಕೊಳ್ಳುವುದಕ್ಕೆ ಅವರಿಗೆ ಜನಪರ ಕಾಳಜಿ ಮತ್ತು ಜನಪರ ನಿಲುವು ಇದ್ದರೆ ಅವರೆಲ್ಲರೂ ಅವರ ಸ್ಥಾನಗಳಿಗೆ ಮರಳಬೇಕು. ಅವರಿಗೆ ರಾಜ್ಯದ ಜನತೆಯ ಬಗ್ಗೆ ಕಾಳಜಿ ಇಲ್ಲ, ರಾಜ್ಯದ ಜನರು ಕಂಗಾಲಾಗಿ ಹೋಗಲಿ ಎನ್ನುವುದಾದರೆ, ಸದನದ ಬಾವಿಯಲ್ಲಿಯೇ ಅವರುಗಳು ಧರಣಿ ಕುಳಿತು ವಾಚ್ ವಿಚಾರವಾಗಿ ಮಾತನಾಡಬಹುದು.

ಸನ್ಮಾನ್ಯ ಸಭಾಪತಿಯವರೆ, ನಾನು ಒಂದು ಮಾತನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ, ಈ ದೇಶದ ಪ್ರಧಾನ ಮಂತ್ರಿಗಳಾದ ಮಾನ್ಯ ನರೇಂದ್ರ ಮೋದಿಯವರು 10 ಲಕ್ಷ ರೂಪಾಯಿಗಳಿಗೆ ಫುಲ್ ಸೂಟ್ ತೆಗೆದುಕೊಂಡಿರುವುದಕ್ಕೆ ತೆರಿಗೆಯನ್ನು ಕಟ್ಟದೆ, ಡಿಕ್ಲೇರ್ ಸಹ ಮಾಡದೇ ಅದನ್ನು ಆಕ್ಷನ್ ಮಾಡಿದ್ದಾರೆ. ಆಗ ನಾವು ಅವರ ರಾಜೀನಾಮೆಯನ್ನು ಕೇಳಿದ್ದೇವೆಯೇ? ಪ್ರಧಾನ ಮಂತ್ರಿಗಳಿಗೆ ಅನ್ವಯಿಸದೇ ಇರುವ ಕಾನೂನು ಮುಖ್ಯಮಂತ್ರಿಗಳಿಗೆ ಹೇಗೆ ಅನ್ವಯಿಸುತ್ತದೆ? ಆಗ ಅವರಿಗೆ ಶಹಭಾಷ್‌ಗಿರಿಯನ್ನು ಇವರೇ ಕೊಟ್ಟಿದ್ದಾರೆ. ಇಲ್ಲಿಗೆ ಒಂದು ಕಾನೂನು, ಅಲ್ಲಿಗೆ ಒಂದು ಕಾನೂನು ಎಂದರೆ ಹೇಗಾಗುತ್ತದೆ?

**ಶ್ರೀ ಕೆ.ಬಿ.ಶಾಣಪ್ಪ (ತಮ್ಮ ಸ್ಥಾನಕ್ಕೆ ಮರಳಿ):-** ಸನ್ಮಾನ್ಯ ಸಭಾಪತಿಯವರೆ, ಮಾನ್ಯ ಸಭಾನಾಯಕರು . . .

**ಶ್ರೀ ಎಸ್.ಆರ್.ಪಾಟೀಲ್(ಸಭಾ ನಾಯಕರು):-** ಸನ್ಮಾನ್ಯ ಸಭಾಪತಿಯವರೆ, ಈ ರಾಜ್ಯದ ಜ್ವಲಂತ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳುವುದಕ್ಕೆ ಗೌರವಾನ್ವಿತ ವಿರೋಧ ಪಕ್ಷದ ಎಲ್ಲ ಸದಸ್ಯರು ಅವರ ಸ್ಥಾನಗಳಿಗೆ ಮರಳಬೇಕೆಂದು ನಾನು ತಮ್ಮ ಮೂಲಕ ಮತ್ತೊಮ್ಮೆ ಮನವಿ ಮಾಡಿಕೊಳ್ಳುತ್ತಿದ್ದೇನೆ. ಅವರಿಗೆ ಈ ರಾಜ್ಯದ ಜನತೆಯ ಬಗ್ಗೆ ಕಾಳಜಿ ಇದೆಯೆಂದು ನಾನು ಭಾವಿಸುತ್ತಿದ್ದೇನೆ. ಈ ರಾಜ್ಯದ ಜನತೆಯ ಬಗ್ಗೆ ಕಾಳಜಿ ಇಲ್ಲ, ಅವರು ಏನಾದರೂ ಆಗಿಹೋಗಲಿ ಎನ್ನುವ ಭಾವನೆ ಅವರುಗಳಲ್ಲಿ ಇದ್ದರೆ, ಅವರು ಸದನದ ಬಾವಿಯಲ್ಲಿಯೇ ಧರಣಿ ಮಾಡಲಿ.

**ಸಭಾಪತಿಯವರು:-** ಸದನ ಆರ್ಡರ್‌ನಲ್ಲಿದ್ದರೆ ಎಲ್ಲ ಸದಸ್ಯರಿಗೂ ಮಾತನಾಡುವುದಕ್ಕೆ ಅವಕಾಶವನ್ನು ನೀಡುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್ಃ–** ಸನ್ಮಾನ್ಯ ಸಭಾಪತಿಯವರೆ, ಅವರುಗಳು ಖಾಯಂ ಆಗಿ ರೆಸಾರ್ಟ್‌ನಲ್ಲೇ ಇರುತ್ತಾರೆ. 'ಏಕೆ ರೆಸಾರ್ಟ್‌ನಲ್ಲಿ ಇದ್ದೀರಿ?' ಎಂದು ಕೇಳಿದರೆ, 'ನಮ್ಮ ಕ್ಷೇತ್ರದ ಜನರು ನೀರು ಬೇಕು, ರಸ್ತೆ ಮಾಡಿಕೊಡಿ ಎಂದು ತಲೆ ತಿನ್ನುತ್ತಾರೆ ಅದಕ್ಕಾಗಿ ರೆಸಾರ್ಟ್‌ನಲ್ಲಿ ಇರುತ್ತೇವೆ' ಎಂದು ಹೇಳುತ್ತಾರೆ.

ಅತ್ಯಂತ ಬೇಶಿಸ್ತಿನ ಪಕ್ಷ ಇಡೀ ದೇಶದ ಇತಿಹಾಸದಲ್ಲಿ ಭಾರಿ ಪ್ರಮಾಣದ ಭ್ರಷ್ಟಾಚಾರದ, ಭಾರಿ ಪ್ರಮಾಣದ ಬೇಶಿಸ್ತಿನ ಸರ್ಕಾರ ಕರ್ನಾಟಕದಲ್ಲಿರುವ ಭಾರತೀಯ ಜನತಾ ಪಕ್ಷದ ಸರ್ಕಾರ ಎಂದು ಜಗಜ್ಜಾಹಿರಾಗಿ ಆಗಿಹೋಗಿದೆ.

**ಶ್ರೀ ಕೆ.ಬಿ.ಶಾಣ್ಣಪ್ಪ (ನಾನು ನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಇವರು ನಮ್ಮ ಮೇಲೆ ಉಲ್ಟಾಹೊಡೆಯುತ್ತಿದ್ದಾರೆ. "ಉಲ್ಟಾ ಚೋರ್, ಕೊತ್ವಾಲ್‌ಕೊ ಡಾಂಟೆ" (ಕಳ್ಳನೇ ತಿರುಗಿ ಪೊಲೀಸರನ್ನು ಬೈಯ್ದ) ಎನ್ನುವ ಹಾಗೆ ಆಗಿದೆ. ಕಳ್ಳತನ ಮಾಡಿ ನಮ್ಮ ಮೇಲೆ ಇವರು ಕಳ್ಳತನದ ಆರೋಪ ಹೊರಿಸಿದರೆ ಹೇಗೆ? ನಾವು ಮಾತನಾಡುವುದನ್ನಾದರೂ ನೀವು ಕೇಳಲಿ.

**ಶ್ರೀ. ಆರ್.ವಿ.ವೆಂಕಟೇಶ್:–** ನಿನ್ನೆ ಎಲ್ಲಾ ಮಾತನಾಡಿದ್ದಾರೆ.

**ಶ್ರೀ.ಕೆ.ಬಿ ಶಾಣಪ್ಪ:–** ಅಂದರೆ ನಾವು ಮಾತನಾಡುವುದು ಏನೂ ಇಲ್ಲ ಎನ್ನುತ್ತಿದ್ದಾರೆಯೇ?

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೆ, ಇಲ್ಲಿ ತಾವು preliminary submission ಮಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದೀರಿ. ಮಾನ್ಯ ವಿರೋಧ ಪಕ್ಷದ ನಆಯಕರು ಉತ್ತರವನ್ನು ಕೊಟಿದ್ದೇನೆ.

**ಶ್ರೀ ಕೆ.ಬಿ.ಶಾಣಪ್ಪ:–** ಮಾನ್ಯ ಸಭಾಪತಿಯವರೆ, ನಾವು ಹೇಲಿದನ್ನು ಕೇಳಲಿಲ್ಲವೆಂದರೆ ಈ ಸದನ ನಡೆಯುವುದಿಲ್ಲ. Keep it in your mind.

**ಶ್ರೀ ಎಸ್.ಆರ್.ಪಾಟೇಲ್:–** ಮಾನ್ಯ ಸಭಾಪತಿಯವರೆ, ತಾವು ಎರಡೂ ಕಡೆಯ ವಿಚಾರಗಳನ್ನು ಕೇಳಿ ದಿರಿ. ತಾವು ಈ ಬಗ್ಗೆ ರೂಲಿಂಗ್ ಕೊಟ್ಟುಬಿಡಿ.

**ಶ್ರೀ ಕೆ.ಬಿ.ಶಾಣಪ್ಪ:–** ರೋಲಿಂಗ್ ಏನಿದೆ, ನಾವು ಮಾತನಾಡಿದ ನಂತರ ರೋಲಿಂಗ್ ಕೊಡಬೇಕಾತ್ತದೆ. ಸಭಾಪತಿಯವರೆ, ಅವರು ರಾಜೀನಾಮೆಯನ್ನು ಕೊಡುತ್ತೇನೆಂದು ಹೇಳಲಿ. ನಾವುಗಳು ಬಂದು ನಮ್ಮ ಸ್ಥಾನಗಳಲ್ಲಿ ಕುಳಿತುಕೊಳ್ಳುತ್ತೇವೆ. You express one point programme.

**ಶ್ರೀ ಎಸ್.ಆರ್.ಪಾಟೇಲ್:–** ಪ್ರಧಾನ ಮಂತ್ರಿಗಳ ರಾಜೀನಾಮೆಯನ್ನು ಕೊಡಿಸಿ. ಅವರು ನೀತಿವಮತರಾಗಿದ್ದರೆ ಪ್ರಧಾನ ಮಂತ್ರಿಗಳ ರಾಜೀನಾಮೆಯನ್ನು ಕೊಡಿಸಿ ಮಾತನಾಡಲಿ. We are known

that you are all shameless people. ನಿಮಗೆ ನೀತಿ ಎನ್ನುವುದಿದ್ದರೆ, ಅವರು ನೀತಿವಂತರಾಗಿದ್ದರೆ, ಮೊದಲು ಪ್ರಧಾನ ಮಂತ್ರಿಗಳ ರಾಜೀನಾಮೆಯನ್ನು ಕೊಡಿಸಿ ಬಂದು ನಂತರ ನಮಗೆ ಕೇಳಿ.

**(ಈ ಹಂತದಲ್ಲಿ ಸದಸ್ಯರಾದ ಶ್ರೀ ಅರುಣ್ ಶಹಾಪುರ ಮತ್ತು ಇನ್ನಿತರ ಸದಸ್ಯರುಗಳು ಬಾವಿಯಿಂದ "ಗಿಫ್ಟಾ – ಥೆಫ್ಟಾ" ಎಂದು ಘೋಷಣೆಯನ್ನು ಕೂಗುತ್ತಿದ್ದರು)**

**ಸಭಾಪತಿಯವರು:–** ದಯಮಾಡಿ ಕುಳಿತುಕೊಳ್ಳಿ, ನಿಮ್ಮ–ನಿಮ್ಮ ಕೋಪ, ಆಕ್ರೋಶಗಳನ್ನು ವ್ಯಕ್ತಮಾಡಿದ್ದು ಆಯಿತು. ನಾವು ಸದನವನ್ನು ನಡೆಸೋಣ. ಸದನವನ್ನು ನಡೆಸುವುದಕ್ಕೆ ಒಂದು ಅವಕಾಶವನ್ನು ಮಾಡಿಕೊಡಿ.

**ಶ್ರೀ ಕೆ.ಬಿ.ಶಾಣಪ್ಪ:–** ,ಆಮು ಸಭಾಪತಿಯವರೆ, ಫೋನ್ ಕದ್ದಾಲಿಕೆ ಮಾಡಿದ್ದಾರೆ ಎಂದಿದ್ದಕ್ಕೆ ಶ್ರೀಮಾನ್ ಹೆಗಡೆಯವರು ರಾಜೀನಾಮೆಯನ್ನು ಕೊಟ್ಟರು. They should keep it in their mind. ಇದು ಒಂದು ಸಣ್ಣ ವಿಷಯ. ಪೋನ್ ಕದ್ದಾಲಿಕೆ ಮಾಡಿದಾರೆ ಎಂದಿದ್ದಕ್ಕೆ ರಾಜೀನಾಮೆಯನ್ನು ಕೊಟ್ಟಂಥವರು ಇರುವ ರಾಜ್ಯ ನಮ್ಮದು. ಕಳ್ಳತನದಿಂದ ಗಡಿಯಾರ ತಂದಿಟ್ಟುಕೊಂಡು ನಾವು ಏನೂ ಮಾಡಿಲ್ಲವೆಂದರೆ ಹೇಗೆ? ಇವರು ಲೂಟಿ ಹೊಡೆದಿದ್ದಾರೆ.

**ಶ್ರೀ ಐವಾನ್ ಡಿ'ಸೋಜಾ:–** ಹೊರಗೆ ಬಂದು ಮಾತನಾಡಿ.

**ಶ್ರೀ ಕೆ.ಬಿ.ಶಾಣಪ್ಪ:–** ಮಾನ್ಯ ಸಭಾಪತಿಯವರೆ, if they not done any thing, ಇವರು ನಮ್ಮ ಒಂದೇ ಒಂದು demand ಒಪ್ಪ.

**ಸಭಾಪತಿಯವರು:–** ನಾನು ಮತ್ತೊಮ್ಮೆ ಕೇಳಿಕೊಳ್ಳುತ್ತೇನೆ. ಎಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ತೆರಳಿ ಈ ಸದನವನ್ನು ನಡೆಸುವುದಕ್ಕೆ ಅನುವು ಮಾಡಿಕೊಡಿ.

**ಶ್ರೀ ಐವಾನ್ ಡಿ'ಸೋಜಾ:–** ಐದು ವರ್ಷಗಳ ಕಾಲ ಜೈಲ್...... ಇವರಿಗೆ ನಾಚಿಕೆಯಾಗುವುದಿಲ್ಲವೇ?

**ಶ್ರೀ ರಾಮಚಂದ್ರಗೌಡ:–** ಮಾನ್ಯ ಸಭಾಪತಿಯವರೆ, Senior of the State, the Chief Minister has violated the rules and regulations. Therefore, we are demanding his resignation as a one point programme. ಈ ರಾಜ್ಯದ ಮುಖ್ಯಮಂತ್ರಿಗಳು ಕಾನೂನು ಬಾಹಿರವಾಗಿ ನಡೆದುಕೊಳ್ಳುತ್ತಿರುವ ಹಿನ್ನೆಲೆಯಲ್ಲಿ ನಆವು ಅವರ ರಾಜೀನಾಮೆಯನ್ನು ಕೇಳುತ್ತಿದ್ದೇವೆ.

**ಸಭಾಪತಿಯವರು:–** ಈಗ ಸಭೆಯನ್ನು ನಾಳೆ ಬೆಳಿಗ್ಗೆ 11.00 ಗಂಟೆಯವರೆವಿಗೂ ಮುಂದೂಡಲಾಗಿದೆ.

**(ಮಧ್ಯಾಹ್ನ 12 ಗಂಟೆ 23 ನಿಮಿಷಗಳಿಗೆ ಮುಂದೂಡಲ್ಪಟ್ಟ ಸದನವು ಪುನಃ ದಿನಾಂಕ:3ನೇ ಮಾರ್ಚ ಮಾಹೇ 2016 ರ ಗುರುವಾರ ಬೆಳಿಗ್ಗೆ 11.00 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)**

ಅತ್ಯಂತ ಬೇಶಿಸ್ತಿನ ಪಕ್ಷ. ಇಡೀ ದೇಶದ ಇತಿಹಾಸದಲ್ಲಿ ಭಾರಿ ಪ್ರಮಾಣದ ಭ್ರಷ್ಟಾಚಾರದ, ಭಾರಿ ಪ್ರಮಾಣದ ಬೇಶಿಸ್ತಿನ ಸರ್ಕಾರ ಎಲ್ಲಾದರೂ ಇದೆ ಎಂದರೆ, ಅದು ಕರ್ನಾಟಕದಲ್ಲಿರುವ ಭಾರತೀಯ ಜನತಾ ಪಕ್ಷದ ಸರ್ಕಾರ ಎಂದು ಹೇಳಿ ಜಗತ್‌ಜಾಹಿರು ಆಗಿಹೋಗಿದೆ.

**ಶ್ರೀ ಕೆ.ಬಿ.ಶಾಣಪ್ಪ (ನಾಮ ನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ಇವರು ನಮ್ಮ ಮೇಲೆ ಉಲ್ಟಾ ಹೊಡೆಯುತ್ತಿದ್ದಾರೆ. "ಉಲ್ಟಾ ಚೋರ್ ಕೊತ್ವಾಲ್‌ಕೊ ಡಾಂಟೆ" (ಕಳ್ಳನೇ ತಿರುಗಿ ಪೊಲೀಸರನ್ನು ಬೈಯ್ದು) ಎನ್ನುವ ಹಾಗೆ ಆಗಿದೆ. ಕಳ್ಳತನ ಮಾಡಿ ನಮ್ಮ ಮೇಲೆ ಇವರು ಕಳ್ಳತನದ ಆರೋಪ ಹೊರಿಸಿದರೆ ಹೇಗೆ? ನಾವು ಮಾತನಾಡುವುದನ್ನಾದರೂ ನೀವು ಕೇಳಿ.

**ಶ್ರೀ ಆರ್.ವಿ.ವೆಂಕಟೇಶ್:-** ನಿನ್ನೆ ಎಲ್ಲಾ ಮಾತನಾಡಿದ್ದೀರಿ.

**ಶ್ರೀ ಕೆ.ಬಿ.ಶಾಣಪ್ಪ:-** ಅಂದರೆ ನೀವು ಮಾತನಾಡುವುದು ಏನೂ ಇಲ್ಲ ಎನ್ನುತ್ತೀರೇನು?

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೆ, ಇಲ್ಲಿ ತಾವು preliminary submission ಮಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದೀರಿ. ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿದರು. ಅದಕ್ಕೆ ತಾವು ನನಗೆ ಉತ್ತರವನ್ನು ಕೊಡುವುದಕ್ಕೆ ಹೇಳಿದಿರಿ. ಸರ್ಕಾರದ ಪರವಾಗಿ ನಾನು ಉತ್ತರವನ್ನು ಕೊಟ್ಟಿದ್ದೇನೆ.

**ಶ್ರೀ ಕೆ.ಬಿ.ಶಾಣಪ್ಪ:-** ಮಾನ್ಯ ಸಭಾಪತಿಯವರೆ, ನಾವು ಹೇಳಿದ್ದನ್ನು ಕೇಳಲಿಲ್ಲವೆಂದರೆ ಈ ಸದನ ನಡೆಯುವುದಿಲ್ಲ. Keep it in your mind.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೆ, ತಾವು ಎರಡೂ ಕಡೆಯ ವಿಚಾರಗಳನ್ನು ಕೇಳಿದಿರಿ. ತಾವು ಈ ಬಗ್ಗೆ ರೂಲಿಂಗ್ ಕೊಟ್ಟುಬಿಡಿ.

**ಶ್ರೀ ಕೆ.ಬಿ.ಶಾಣಪ್ಪ:-** ರೂಲಿಂಗ್ ಏನಿದೆ, ನಾವು ಹೇಳಿದ ಮೇಲೆ ರೂಲಿಂಗ್. ಮಾನ್ಯ ಸಭಾಪತಿಯವರೆ, ಅವರು ರಾಜೀನಾಮೆಯನ್ನು ಕೊಡುತ್ತೇನೆಂದು ಹೇಳಲಿ, ನಾವುಗಳು ಬಂದು ನಮ್ಮ ಸ್ಥಾನಗಳಲ್ಲಿ ಕುಳಿತುಕೊಳ್ಳುತ್ತೇವೆ. You express one point programme.

**ಶ್ರೀ ಎಸ್.ಆರ್.ಪಾಟೀಲ್:-** ಪ್ರಧಾನ ಮಂತ್ರಿಗಳ ರಾಜೀನಾಮೆಯನ್ನು ಕೊಡಿಸಿ. ನೀವು ನೀತಿವಂತರಾಗಿದ್ದರೆ ನಿಮ್ಮ ಪ್ರಧಾನ ಮಂತ್ರಿಗಳ ರಾಜೀನಾಮೆಯನ್ನು ಕೊಡಿಸಿ ಮಾತನಾಡಿ. We are known that you are all shameless people. ನಿಮಗೆ ನೀತಿ ಎನ್ನುವುದಿದ್ದರೆ, ನೀವು

ನೀತಿವಂತರಾಗಿದ್ದರೆ, ಮೊದಲು ನೀವು ಪ್ರಧಾನ ಮಂತ್ರಿಗಳ ರಾಜೀನಾಮೆಯನ್ನು ಕೊಡಿಸಿ ಬಂದು ನಂತರ ನಮಗೆ ಕೇಳಿ.

**(ಈ ಹಂತದಲ್ಲಿ ಸದಸ್ಯರಾದ ಶ್ರೀ ಅರುಣ್ ಶಹಾಪುರ ಮತ್ತು ಇನ್ನಿತರ ಸದಸ್ಯರುಗಳು ಬಾವಿಯಿಂದ "ಗಿಫ್ಟಾ – ಥೆಫ್ಟಾ" ಎಂದು ಘೋಷಣೆಯನ್ನು ಕೂಗುತ್ತಿದ್ದರು)**

**ಸಭಾಪತಿಯವರು:–** ದಯಮಾಡಿ ಕುಳಿತುಕೊಳ್ಳಿ. ನಿಮ್ಮ-ನಿಮ್ಮ ಕೋಪ, ಆಕ್ರೋಶಗಳನ್ನು ವ್ಯಕ್ತ ಮಾಡಿದ್ದು ಆಯಿತು. ನಾವು ಸದನವನ್ನು ನಡೆಸೋಣ. ಸದನವನ್ನು ನಡೆಸುವುದಕ್ಕೆ ಒಂದು ಅವಕಾಶವನ್ನು ಮಾಡಿಕೊಡಿ.

**ಶ್ರೀ ಕೆ.ಬಿ.ಶಾಣಪ್ಪ:–** ಮಾನ್ಯ ಸಭಾಪತಿಯವರೆ, ಫೋನ್ ಕದ್ದಾಲಿಕೆ ಮಾಡಿದ್ದಾರೆ ಎಂದಿದ್ದಕ್ಕೆ ಶ್ರೀಮಾನ್ ಹೆಗಡೆಯವರು ರಾಜೀನಾಮೆಯನ್ನು ಕೊಟ್ಟರು. They should keep it in their mind. ಇದು ಒಂದು ಸಣ್ಣ ವಿಷಯ. ಫೋನ್ ಕದ್ದಾಲಿಕ' ಮಾಡಿದ್ದಾರ' ಎಂದಿದ್ದಕ್ಕೆ ರಾಜೀನಾಮೆಯನ್ನು ಕೊಟ್ಟಂಥವರು ಇರುವ' ರಾಜ್ಯ ನಮ್ಮದು. ಕಳ್ಳತನದಿಂದ ಗಡಿಯಾರ' ತಂ ದಿಟ್ಟುಕೊಂಡು ನಾವು ಏನೂ ಮಾಡಿಲ್ಲವೆಂದರೆ ಹೇಗೆ? ಇವರು ಲೂಟಿ ಹೊಡೆದಿದ್ದಾರೆ. ಇವರೆಲ್ಲಾ ಅದನ್ನೇ ಮಾಡಿದ್ದಾರೆ.

**ಶ್ರೀ ಐವಾನ್ ಡಿ'ಸೋಜಾ:–** ಹೊರಗೆ ಬಂದು ಮಾತನಾಡಿ.

**ಶ್ರೀ ಕೆ.ಬಿ.ಶಾಣಪ್ಪ:–** ಮಾನ್ಯ ಸಭಾಪತಿಯವರೆ, if they not done anything, ಇವರು ನಮ್ಮ ಒಂದೇ ಒಂದು demand ಒಪ್ಪಲಿ.

**ಸಭಾಪತಿಯವರು:–** ನಾನು ಮತ್ತೊಮ್ಮೆ ಕೇಳಿಕೊಳ್ಳುತ್ತೇನೆ. ಎಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ತೆರಳಿ ಈ ಸದನವನ್ನು ನಡೆಸುವುದಕ್ಕೆ ಅನುವು ಮಾಡಿಕೊಡಿ.

**ಶ್ರೀ ಐವಾನ್ ಡಿ'ಸೋಜಾ:–** ಐದು ವರ್ಷಗಳ ಕಾಲ ಜೈಲ್....... ಇವರಿಗೆ ನಾಚಿಕೆಯಾಗುವುದಿಲ್ಲವೇ?

**ಶ್ರೀ ರಾಮಚಂದ್ರಗೌಡ:–** ಮಾನ್ಯ ಸಭಾಪತಿಯವರೆ, Senior of the State, the Chief Minister has violated the rules and regulations. Therefore, we are demanding his resignation as a one point programme. ಈ

ರಾಜ್ಯದ ಮುಖ್ಯಮಂತ್ರಿಗಳು ಕಾನೂನು ಬಾಹಿರವಾಗಿ ನಡೆದುಕೊಳ್ಳುತ್ತಿರುವ ಹಿನ್ನೆಲೆಯಲ್ಲಿ ನಾವು ಅವರ ರಾಜೀನಾಮೆಯನ್ನು ಕೇಳುತ್ತಿದ್ದೇವೆ.

**ಸಭಾಪತಿಯವರು:–** ಈಗ ಸಭೆಯು ಮುಕ್ತಾಯವಾಗಿ ನಾಳೆ ಬೆಳಿಗ್ಗೆ 11.00 ಗಂಟೆಗೆ ಸೇರುವುದು.

**(ಸದನವು ಮಧ್ಯಾಹ್ನ 12 ಗಂಟೆ 23 ನಿಮಿಷಗಳಿಗೆ ಮುಕ್ತಾಯಗೊಂಡು ಪುನಃ ದಿನಾಂಕ: 03–03–2016ರ ಗುರುವಾರದಂದು ಬೆಳಿಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು)**

~~~~~
~~~~~